## ಪ್ರಾರ್ಥನೆ

ಓಂ ವಿಶ್ವಾಚಾರ್ಯಂ ಜಗದ್ವಂದ್ಯಂ
ವಿವೇಕಾನಂದರೂಪಿಣಮ್ ।
ವೀರೇಶ್ವರಾತ್-ಸಮುತ್ಪನ್ನಂ ಸಪ್ತರ್ಷಿಮಂಡಲಾಗತಮ್ ॥
ಜ್ಞಾನಭಕ್ತಿಪ್ರದಾತಾರಂ ಪದ್ಮಾಕ್ಷಗೌರವಿಗ್ರಹಂ ।
ಧ್ಯಾಯೇದ್ ದೇವಂ ಜ್ಯೋತಿಃಪುಜಂ
ಲೋಕಕಲ್ಯಾಣಕಾರಿಣಂ ॥

ಸಪ್ತರ್ಷಿ ಮಂಡಲದಿಂದ ಆಗಮಿಸಿದ, (ಕಾಶಿಯ) ವೀರೇಶ್ವರನ ಕೃಪೆಯಿಂದ ಜನ್ಮತಾಳಿದ, ಲೋಕಾಚಾರ್ಯರೂ, ಜಗದ್ವಂದ್ಯರೂ, ಜ್ಞಾನಭಕ್ತಿಗಳನ್ನು ಕರುಣಿಸುವವರೂ, ಗೌರವರ್ಣದಿಂದ ಕೂಡಿದವರೂ, ತಾವರೆಯಂಥ ಕಣ್ಣುಳ್ಳವರೂ, ದೇವತಾಸ್ವರೂಪರಾದ, ಇಡೀ ಲೋಕಕ್ಕೇ ಮಂಗಳದಾಯಕರಾದ, ಜ್ಯೋತಿಯಿಂದ ಬೆಳಗುತ್ತಿರುವ ವಿವೇಕಾನಂದರ ಸ್ವರೂಪವನ್ನು ಕುರಿತು (ನಾನು) ಧ್ಯಾನಿಸುವೆ.

### ದಿವ್ಯದ ಗಂಟು

ವಿಶ್ವವನ್ನೆ ಜಯಿಸಿದವರುಂಟೆ ನಲವತ್ತಕ್ಕೆ?
ಹೊರಹೊಮ್ಮಿದವರುಂಟೆ ಗುಡುಗು ಸಿಡಿಲೊಡಲಿಂದ?
ನಕ್ಷತ್ರಗಳನ್ನೆ ಸರ ಮಾಡಿಕೊಂಡು, ಕೊರಳಲ್ಲಿ
ಧರಿಸಿದವರುಂಟೆ? ನರನಲ್ಲಿ ನಾರಾಯಣನ
ಅರಸಿ ಕಂಡವರುಂಟೆ? ಮಿಂಚಿನ ಮುದ್ರೆಯೊತ್ತಿದವರುಂಟೆ
ಸಮಸ್ತ ಜನಸ್ತೋಮ ಹೃದಯಗಳ ಮೇಲೆ?
ಯುಗಶಿಲ್ಪಿಯಾದವರುಂಟೆ? ಭಾರತ ಸ್ವಾತಂತ್ರ್ಯ
ಚಂಡತಮ ಸಂಗ್ರಾಮಯಜ್ಞಕ್ಕೆ ಅವ್ಯಕ್ತ
ಅಧ್ವರ್ಯುವಾದವರುಂಟೆ? ಸಖನಾದವರುಂಟೆ
ಜ್ವಾಲಾಮುಖಿಗೆ? ಕುಸುಮಕಿಂತ ಮೃದುವಾದವರು,
ವಜ್ರಕಿಂತ ಕಠೋರವಾದವರು ಉಂಟೆ? ಉಂಟೇ ಉಂಟು!
ಯಾರವರು? ಶ್ರೀ ವಿವೇಕಾನಂದ : ದಿವ್ಯದ ಗಂಟು!

— ಡಾ. ಸಿ.ಪಿ.ಕೆ.

---

## ಸೂಕ್ತಿಪ್ರಭ

* ಜಗತ್ತಿನಲ್ಲಿ ಬದಲಾವಣೆಯನ್ನು ಕಾಣಬಯಸುವೆಯಾದರೆ, ನಿನ್ನಲ್ಲಿ ಬದಲಾವಣೆಯನ್ನು ಮೊದಲು ಕಂಡುಕೋ. —ಗಾಂಧೀಜಿ
* ತನಗೆ ಭಯವೆಂದರೆ ಏನೆಂದು ತಿಳಿಯದು ಎಂದು ಜಂಬಕೊಚ್ಚಿಕೊಳ್ಳುವವನು ಒಬ್ಬನೇ—ಹೇಡಿ. —ಬರ್ಟ್ರಂಡ್ ರಸಲ್
* ಭವಿಷ್ಯದ ಯಶಸ್ಸಿಗೆ ಇರುವ ಅತ್ಯಂತ ದೊಡ್ಡ ವೈರಿಯೆಂದರೆ, ನಾವು ಈಗಾಗಲೇ ಗಳಿಸಿರುವ ಯಶಸ್ಸು. —ಅಜೀಮ್ ಪ್ರೇಂಜಿ
* ಕಲಿಯುವುದನ್ನು ಆಸಕ್ತಿಯಿಂದ ಕಲಿತರೆ, ನಿಷ್ಠೆಯಿಂದ ಅಭ್ಯಾಸ ಮಾಡಿದರೆ, ಎಲ್ಲ ಭಯಗಳಿಂದಲೂಮುಕ್ತನಾಗಬಹುದು. —ಉಸ್ತಾದ್ ಬಿಸ್ಮಿಲ್ಲಾ ಖಾನ್
* ದಿನದಲ್ಲಿ ನೂರು ಬಾರಿ ತಪ್ಪು ಕೆಲಸಗಳನ್ನು ಮಾಡುವ ಅವಕಾಶಗಳು ಒದಗುತ್ತವೆ. ಆದರೆ ಒಳ್ಳೆಯ ಕೆಲಸಗಳನ್ನು ಮಾಡಲು ಎಂದೋ ಒಮ್ಮೆ ಅವಕಾಶ ದೊರೆಯುತ್ತದೆ. —ವಾಲ್ಟೇರ್
* ಕಾನೂನಿನ ಆವಶ್ಯಕತೆಯಿದೆ. ಆದರೆ ಅಚ್ಚಾಗಿರುವ ಕಾನೂನಿಗಿಂತ ಅಂತರಂಗದ ಕಾನೂನು ಕೆಲವೆಡೆ ಹೆಚ್ಚು ಪ್ರಭಾವಶಾಲಿ. —ಅನಾಮಿಕ
* ಎಲ್ಲವೂ ನಿನ್ನ ವಿರುದ್ಧವಾಗಿದೆ ಎಂದು ಅನಿಸುವಾಗ, ತನ್ನೆದುರು ಬೀಸುವ ಗಾಳಿಯನ್ನು ಭೇದಿಸಿಯೇ ವಿಮಾನವು ಮುನ್ನುಗ್ಗುವುದು ಎಂಬುದನ್ನು ನೆನಪಿಡು. —ಅನಾಮಿಕ
* ಜೀವನಕ್ಕಿಂತ ಶಿಸ್ತಿನ ಜೀವನವೇ ಹೆಚ್ಚು ಬೆಲೆಯುಳ್ಳದ್ದು. ಏಕೆಂದರೆ ಶಿಸ್ತಿನಿಂದಲೇ ಜೀವನವು ಮೌಲ್ಯವನ್ನು ಪಡೆದುಕೊಳ್ಳುವುದು. —ಅನಾಮಿಕ
* ಮನುಷ್ಯ ತನ್ನ ಒಡೆಯನಾದಾಗ ಮಾತ್ರ ಮತ್ತೊಬ್ಬರ ಮೇಲೆ ದಬ್ಬಾಳಿಕೆ ನಡೆಸುವ ಆಸೆಯನ್ನು ಗೆಲ್ಲಬಲ್ಲ. —ಅನಾಮಿಕ
* ಜ್ಞಾನವನ್ನು ಸಂಪಾದಿಸಲು ನಿರ್ದಿಷ್ಟವಾದ ಮಾರ್ಗವಿದೆ; ಮುಂದುವರಿಯಲು ಸಾಧ್ಯವಿದೆ. ಅದಕ್ಕೆ ಬೇಕಾಗಿರುವುದು ಕಲಿಯುವ ಆಸಕ್ತಿಯೊಂದೇ. —ಜೆ.ಸಿ. ರಾಬರ್ಟ್ಸ್